**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 10**
**ಚಾ.ಸಾ.ಸಂಖ್ಯೆಃ 04**

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ**

**ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10047/2025**

| | |
|---|---|
| ಹೆಸರುಃ | ಶ್ರೀದೇವಿ ಮಾಂಗ ಅಲಿಯಾಸ ಮೇತ್ರಿ |
| ತಂದೆಯ ಹೆಸರುಃ | ಕಲ್ಲೊಳ್ಳೆಪ್ಪ |
| ವಯಸ್ಸುಃ | 53 ವರ್ಷ |
| ಉದ್ಯೋಗಃ | ವ್ಯಾಪಾರ |
| ವಾಸಃ | ಮುಧೋಳ |

**ಸಾಕ್ಷಿಯನ್ನು ದಿಃ 04.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ-**

1. ಈಗ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದೆ. ಚಾಸಾ-1 ನನ್ನ ಮಗ. ಚಾಸಾ-5 ನನ್ನ ಸೊಸೆ. ಚಾಸಾ-6 ರಿಂದ 9 ಇವರ ಪರಿಚಯ ಇದೆ. ಸುಮಾರು 5 ವರ್ಷಗಳ ಹಿಂದೆ ಹಿರೇಕೆರಿ ಗಲ್ಲಿಯಲ್ಲಿರುವ ನನ್ನ ಮನೆಯಲ್ಲಿ ನಾನು, ಚಾಸಾ-1, 5 ಹಾಗೂ ಮೊಮ್ಮಕ್ಕಳು ಇರುವಾಗ ಮದ್ಯಾಹ್ನ 02.30 ಗಂಟೆ ಸಮಯದಲ್ಲಿ ಈಗ ನ್ಯಾಯಾಲಯದ ಮುಂದಿರುವ ಆರೋಪಿತರು ನಮ್ಮ ಮನೆಗೆ ಬಂದರು.

2. ನನಗೆ ಬೋಸಡಿ, ಹಡಸು ಅಂತಾ ಬೈಯ್ದು ಎಲ್ಲಿದ್ದಾನೆ ನಿನ್ನ ಮಗ ಅಂತಾ ಕೇಳಿದರು. ನಾನು ಯಾಕೆ ಬೈಯುತ್ತಿ ಅಂತಾ ಕೇಳಿದೆ. ಆಗ ಆರೋಪಿ ಗಣಪತಿ ನನ್ನ ಸೀರೆ ಹಿಡಿದು ಎಳೆದ. ಆರೋಪಿ ಕಾಳಪ್ಪ ಬಡಿಗೆಯಿಂದ ನನ್ನ ಎಡಗೈಗೆ ಹೊಡೆದ. ನಾನು ನೆಲಕ್ಕೆ ಬಿದ್ದು ಒದ್ದಾಡ ಹತ್ತಿದೆ. ಆಗ ಆರೋಪಿ ಗಣಪತಿ "ನಿನ್ನನ್ನು ಮುಗಿಸಿಯೇ ಹೋಗುತ್ತೇವೆ " ಅಂತಾ ಅಂದು ನನ್ನ ಕುತ್ತಿಗೆ ಹಿಚುಕಿ ಕೊಲೆ ಮಾಡಲು ಪ್ರಯತ್ನಿಸಿದ.

3. ಆರೋಪಿ ಕಾಳಪ್ಪ ಆಗ ಕಾಲಿನಿಂದ ಒದ್ದ. ನಾನು ಅಳಲು ಆರಂಭಿಸಿದೆ. ನಾನು ಕೂಗಾಡುವುದನ್ನು ಕೇಳಿ ಮಲಗಿದ್ದ ನನ್ನ ಮಗ ಎದ್ದು ಬಂದ. ಆಗ ಆರೋಪಿ ಅರುಣ ಹಾಗೂ ಆನಂದ ಅವನಿಗೆ ಬಡಿಗೆಯಿಂದ ಹೊಡೆದರು. ನಂತರ ಓಣಿಯಲ್ಲಿದ್ದ ಮಂದಿ ಸೈದು ಹಾಗೂ ಪರಶುರಾಮ ಚಾಸಾ-6 ಹಾಗೂ 7 ಬಂದು ಜಗಳ ಬಿಡಿಸಿದರು. ನಾನು ಈ ಬಗ್ಗೆ ಕೇಳಿದಾಗ ಚಾಸಾ-1 ನನ್ನ ಮಗ ಶೇಖರ ಹಿಂದಿನ ದಿವಸ ಆರೋಪಿ ಕಾಳಪ್ಪನಿಗೂ ಹಾಗೂ ತನಗೂ ಹಣಕಾಸಿನ ವಿಷಯವಾಗಿ ಜಗಳವಾಗಿದೆ ಅಂತಾ ಹೇಳಿದ. ಈಗ ನಾನು ನೋಡುತ್ತಿರುವ ಮು.ಮಾ. 1 ಆರೋಪಿತರು ನಮಗೆ ಹೊಡೆಯಲು ಉಪಯೋಗಿಸಿದ ಬಡಿಗೆ ಇದೆ.

4. ಈ ಘಟನೆಯ ಬಗ್ಗೆ ನಾನು ಪೋಲೀಸರ ಮುಂದೆ ಹಾಗೂ ನ್ಯಾಯಾಧೀಶರ ಮುಂದೆ ನಿಪಿ-13 ರಂತೆ ಹೇಳಿಕೆ ನೀಡಿದ್ದೇನೆ. ನಿಪಿ-5

ಹಾಗೂ 6 ಜಗಳವಾದ ನಂತರ ಪೋಲೀಸರು ಬಂದಾಗ ತೆಗೆದ ಫೋಟೋಗಳು ಇರುತ್ತವೆ. ಈಗ ನಾನು ನೋಡುತ್ತಿರುವ ನಿಪಿ–4 ಕ್ಕೆ ನನ್ನ ಸಹಿ ಇದೆ. (ಸದರಿ ಸಹಿಯನ್ನು ನಿಪಿ–4(ಸಿ) ಅಂತಾ ಗುರುತಿಸಲಾಯಿತು.) ಈಗ ನೋಡುತ್ತಿರುವ ನಕ್ಷೆಯ ಮೇಲೆ ನನ್ನ ಸಹಿ ಇದೆ. (ಸದರಿ ನಕ್ಷೆಯನ್ನು ನಿಪಿ–16 ಅಂತಾ, ಅದರ ಮೇಲಿನ ಸಹಿಯನ್ನು ನಿಪಿ–16(ಎ) ಅಂತಾ ಗುರುತಿಸಲಾಯಿತು.

**ಪಾಟೀ ಸವಾಲುಃ 2 ರಿಂದ 4 ನೇ ಆರೋಪಿತರ ಪರವಾಗಿ ಶ್ರೀ. ಎಸ್.ಸಿ.ಎಚ್. ವಕೀಲರಿಂದಃ**

1. ನಮ್ಮ ಮನೆ ಆಶ್ರಯ ಯೋಜನೆಯಡಿ ನೀಡಲಾಗಿದ್ದು ಕೇವಲ ಒಂದೇ ಕೋಣೆಯ ಶೆಡ್ಡು ಇದೆ. ಆರೋಪಿತರು ಮನೆಯ ಒಳಗಡೆ ಬಂದಿದ್ದರು. ಚಾಸಾ–1 ನನ್ನ ಮಗ ಅದೇ ಕೋಣೆಯಲ್ಲಿಯೇ ಮಲಗಿದ್ದ. ಒಳಗೆ ಬಂದ ನಂತರ ಆ ಕೋಣೆಯಲ್ಲಿರುವ ಎಲ್ಲರೂ ಒಬ್ಬರಿಗೊಬ್ಬರು ಕಾಣಿಸುತ್ತಾರೆ ಎಂದರೆ ಸರಿ. ನನ್ನ ಇಬ್ಬರು ಮೊಮ್ಮಕ್ಕಳು ಅಲ್ಲಿದ್ದರು. ಅವರಲ್ಲಿ ಒಬ್ಬನಿಗೆ 4 ವರ್ಷ, ಒಬ್ಬನಿಗೆ 5 ವರ್ಷ ವಯಸ್ಸು ಇದೆ. ನಮ್ಮ ಮನೆ ಸಣ್ಣದಿದೆ ಎಂದರೆ ಸರಿ. ಅಳತೆ ಹೇಳಲು ಬರುವುದಿಲ್ಲ. ಹೊರಗಿಂದ ಯಾರಾದರೂ ನಮ್ಮ ಮನೆಯಲ್ಲಿ ಬಂದಲ್ಲಿ ಎಲ್ಲರಿಗೂ ಗೊತ್ತಾಗುತ್ತದೆ ಎಂದರೆ ಸರಿ.

2. ನನ್ನ ಮಗ ಕೆಳಗಡೆ ಹಾಸಿಗೆ ಹಾಸಿಕೊಂಡು ಮಲಗಿದ್ದ. ಮಂಚ ಇರಲಿಲ್ಲ. ನನ್ನ ಸೊಸೆ ಕೂಡ ಅಲ್ಲಿಯೇ ಅಡುಗೆ ಮಾಡುತ್ತಿದ್ದಳು.

ಆರೋಪಿತರು ಬಂದ ನಂತರ, ನಾನು ಕೂಗಿದ ನಂತರ, ನನ್ನ ಮಗ ಹಾಗೂ ಸೊಸೆ ಅವರನ್ನು ನೋಡಿದರು.

3. ಆರೋಪಿತರು ನನ್ನನ್ನು ಹೊಡೆದ ಜಾಗೆ ನಮ್ಮ ಮನೆಯ ಹೊರಗಡೆ ಇರುತ್ತದೆ. ನಾನು ಮನೆಯ ಹೊರಗಡೆಯೇ ಬಿದ್ದಿದ್ದೆ. ಆರೋಪಿ 1 ಸೀರೆ ಹಿಡಿದು ಜಗ್ಗಿದ ಎನ್ನುವ ಘಟನೆ ಮನೆಯ ಹೊರಗಡೆ ಆಗಿದೆ. ಆರೋಪಿ 1 ನನ್ನ ಕುತ್ತಿಗೆ ಹಿಚುಕಿದ ಅಂತಾ ಹೇಳುವ ಘಟನೆ ಕೂಡ ಮನೆಯ ಹೊರಗಡೆಯೇ ಆಗಿದೆ. ಆರೋಪಿ 1 ನನ್ನ ಕುತ್ತಿಗೆಯನ್ನು ಎರಡೂ ಕೈಗಳಿಂದ ಒತ್ತಿದ. ಆರೋಪಿತರು ನನ್ನನ್ನು ಕೆಡವುವಾಗ ನಾನು ಕೂಗಾಡಿದೆ. ಆಗ ನನ್ನ ಮಗ ಮನೆಯಿಂದ ಹೊರಗಡೆ ಬಂದ.

4. ಆರೋಪಿ ಕಾಳಪ್ಪ ಈತನ ಕೈಯಲ್ಲಿ ಮಾತ್ರ ಬಡಿಗೆ ಇತ್ತು. ಉಳಿದವರ ಹತ್ತಿರ ಬಡಿಗೆ ಇರಲಿಲ್ಲ. ಆರೋಪಿ 1 ಕುತ್ತಿಗೆ ಹಿಚುಕಲು ಪ್ರಯತ್ನ ಮಾಡಿದ ನಂತರ ನನ್ನ ಮಗ ಮನೆಯಿಂದ ಹೊರಗೆ ಬಂದ. ನನಗೆ ಆರೋಪಿತರು ಹಲ್ಲೆ ಮಾಡಿದ್ದರಿಂದ ಎಡ ರಟ್ಟೆಗೆ, ಎರಡೂ ಕಾಲುಗಳಿಗೆ, ಹೊಟ್ಟೆಗೆ ಹಾಗೂ ಕುತ್ತಿಗೆಗೆ ಗಾಯಗಳಾಗಿದ್ದವು. ಆರೋಪಿ ಕಾಳಪ್ಪ ಹೊಟ್ಟೆಗೆ ಒದ್ದ. ನನ್ನ ಮಗನಿಗೆ ಆರೋಪಿತರು ಏನನ್ನು ತೆಗೆದುಕೊಂಡು ಹೊಡೆದರು ಅಂತಾ ನನಗೆ ಗೊತ್ತಿಲ್ಲ, ನಾನು ಬಿದ್ದಿದ್ದೆ. ಆಗ ಸ್ಥಳದಲ್ಲಿ ಅಜಮಾಸು 10–15 ಮಂದಿ ಇದ್ದರು.

5. ನಾನು ಕೂಗಿಕೊಂಡ ನಂತರ ಬೇರೆ ಜನರು ಬಂದರು. ಆರೋಪಿತರು ನನ್ನನ್ನು ಹೊಡೆಯುವಾಗ ನನ್ನ ಸೊಸೆ ಅಲ್ಲಿಗೆ ಬಂದಳು. ಸದರಿ ಘಟನೆ ಸುಮಾರು ಅರ್ಧ ಗಂಟೆ ಕಾಲ ಆಗಿದೆ. ನಮಗೆ ರಕ್ತಗಾಯಗಳು ಆಗಿರಲಿಲ್ಲ. ನಾವು ಧರಿಸಿದ ಬಟ್ಟೆಗಳು ಹರಿದಿರಲಿಲ್ಲ. ನಾನು ಹಾಗೂ ನನ್ನ ಮಗ 02.30 ಗಂಟೆಯ ಸಮಯದಲ್ಲಿ ಆಸ್ಪತ್ರೆಗೆ ಹೊರಟಿದ್ದೆವು, ಆಗ ಚಾಸಾ–9 ಅಲ್ಲಿಗೆ ಬಂದ. ನಮ್ಮಿಬ್ಬರನ್ನು ಮೋಟಾರು ಸೈಕಲಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದ. ಚಾಸಾ–9 ವಕೀಲಿಕೆ ಮಾಡುತ್ತಾರೆ.

6. ನಮ್ಮನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾವು ಆಸ್ಪತ್ರೆ ತಲುಪಿದಾಗ ಮಧ್ಯಾಹ್ನ 03.00 ಗಂಟೆಯಾಗಿತ್ತು. ನಾನು ಎರಡು ವಾರಗಳ ಕಾಲ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ನನಗೆ ಸಲಾಯಿನ್ ಹಚ್ಚಲಾಗಿತ್ತು. ಸದರಿ ಎರಡು ವಾರಗಳ ಕಾಲ ನಾನು ಆಸ್ಪತ್ರೆಯಲ್ಲಿದ್ದೆ. ಆ ಅವಧಿಯಲ್ಲಿ ನಾನು ಮನೆಗೆ ಹೋಗಿಲ್ಲ. ನನ್ನ ಮಗ ಒಂದು ದಿವಸ ಆಸ್ಪತ್ರೆಯಲ್ಲಿದ್ದ.

7. ಘಟನೆಯಾಗಿದೆ ಅಂತಾ ಹೇಳುವ ದಿವಸದ ಹಿಂದಿನ ದಿನ ನನ್ನ ಮಗ ಆರೋಪಿ 2 ಈತನಿಗೆ ಚಾಕುವಿನಿಂದ ಹಲ್ಲೆ ಮಾಡಿದ್ದ ಎಂದರೆ ಸರಿಯಲ್ಲ. ಆರೋಪಿ 2 ಆ ಕಾರಣದಿಂದಾಗಿ ಕುಬಸದ ಆಸ್ಪತ್ರೆಗೆ ದಾಖಲಾಗಿದ್ದ ಎಂದರೆ ಸರಿಯಲ್ಲ. ಘಟನೆ ನಡೆದಿದೆ ಅಂತಾ ಹೇಳುವ ದಿವಸ ಮುಂಜಾನೆ ನಾನು 07.00 ರಿಂದ 08.00 ಗಂಟೆಯ ಅವಧಿಯಲ್ಲಿ ಆರೋಪಿ 1 ಇವರ ಮನೆಗೆ

ಹಾಗೂ ಹಿರಿಯರಾದ ಭೀಮಶಿ, ಸದಾ, ಬಸು ಎನ್ನುವವರ ಮನೆಗೆ ಹೋಗಿದ್ದೆ.

8. ನಾನು ಹಿರಿಯರಿಗೆ ನನ್ನ ಮಗನ ವಿರುದ್ಧ ದೂರು ಸಲ್ಲಿಸಬಾರದು ಅಂತಾ ಕೇಳಲು ಹೋಗಿರಲಿಲ್ಲ. ಆದರೆ ಒಬ್ಬರಿಗೊಬ್ಬರು ಜಗಳವಾಗುವುದು ಬೇಡ ಅಂತಾ ಕುಳಿತು ನಿರ್ಧರಿಸಿಕೊಳ್ಳಿರಿ ಅಂತಾ ಹೇಳಲು ಹೋಗಿದ್ದೆ. ನಾನು ಆರೋಪಿ ಕಾಳಪ್ಪ ನನ್ನ ಮಗನ ವಿರುದ್ಧ ದೂರು ಕೊಡಬಾರದು ಅಂತಾ ಕೇಳಲು ಹೋಗಿದ್ದೆ, ಆಗ ಆರೋಪಿ ಗಣೇಶ ನಮಗೆ ಬೈಯ್ದು ಕಳಿಸಿದ್ದ ಎಂದರೆ ಸರಿಯಲ್ಲ. ನನ್ನ ಮಗ ಬಿಜೆಪಿ ಪಕ್ಷದ ಕಾರ್ಯಕರ್ತ ಇದ್ದಾನೆ ಎಂದರೆ ಸರಿಯಲ್ಲ.

9. ನನ್ನ ಮಗ ರಾಜಕೀಯದ ಪ್ರಭಾವ ಬೀರಿ ಆರೋಪಿತರು ತನ್ನ ವಿರುದ್ಧ ದೂರು ಸಲ್ಲಿಸಲಾರದಂತೆ ಮಾಡುವ ಸಲುವಾಗಿ ಸುಳ್ಳು ದೂರು ಸಲ್ಲಿಸಿ ಪ್ರಕರಣ ದಾಖಲಿಸುವಂತೆ ಮಾಡಿದ್ದಾನೆ ಎಂದರೆ ಸರಿಯಲ್ಲ. ನಿಪಿ-13 ರಲ್ಲಿ ನಿಮ್ಮ ಬಟ್ಟೆಗಳು ಹರಿದಿದ್ದಾವೆ ಅಂತಾ ಹೇಳಿಕೆ ನೀಡಿದ್ದೀರಾ ಎನ್ನುವ ಸೂಚನೆಗೆ ಸಾಕ್ಷಿದಾರರು "ನಿಜ. ಗಡಿಬಿಡಿಯಲ್ಲಿ ಹೇಳಿದ್ದೇನೆ" ಅಂತಾ ಹೇಳುತ್ತಾರೆ. ಆರೋಪಿ 3 ಹಾಗೂ 4 ನನ್ನ ಮಗನಿಗೆ ಬಡಿಗೆಯಿಂದ ಹೊಡೆದರು ಅಂತಾ ನಾನು ಪೋಲೀಸರ ಮುಂದೆ ಹೇಳಿದ್ದೇನೆ. ಆದರೆ ನ್ಯಾಯಾಲಯದ ಮುಂದೆ ಹೇಳುವಾಗ ಗಡಿಬಿಡಿಯಲ್ಲಿ ಆ ವಿಚಾರ ಹೇಳಿಲ್ಲ.

10. ನಾನು ಮುಖ್ಯ ಸಾಕ್ಷಿಯಲ್ಲಿ ಹೇಳಿದಂತೆ ಆರೋಪಿತರು ನಮ್ಮ ಮನೆಗೆ ಬಂದಿಲ್ಲ, ನನ್ನ ಮೇಲೆ ಹಲ್ಲೆ ಮಾಡಿಲ್ಲ, ಕೊಲೆ ಮಾಡಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಬಿಡಿಸಲು ಬಂದ ಅಂತಾ, ಆಗ ಆರೋಪಿ 3 ಹಾಗೂ 4 ಅವನಿಗೂ ಕೂಡ ಕೊಲಿನಿಂದ ಹಲ್ಲೆ ಮಾಡಿದರು ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಚಾಸಾ-6 ಹಾಗೂ 7 ಬಂದು ಜಗಳ ಬಿಡಿಸಿಕೊಂಡರು ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಮು.ಮಾ. 1 ಎಲ್ಲ ಕಡೆಗೆ ಸಿಗುತ್ತದೆ ಎಂದರೆ ಸರಿ. ಮು.ಮಾ. 1 ರಿಂದಲೇ ನಮ್ಮ ಮೇಲೆ ಹಲ್ಲೆ ಮಾಡಿದ್ದಾರೆ ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

11. ಘಟನಾ ಜಾಗೆಯಲ್ಲಿ ಸ್ಥಳ ತೋರಿಸಿದೆ ಅಂತಾ, ಪೋಲೀಸರು ನಮ್ಮ ಸಮಕ್ಷಮದಲ್ಲಿ ಪಂಚನಾಮೆ ಮಾಡಿದರು ಅಂತಾ, ನಿಪಿ-4 ಹಾಗೂ 5 ರ ಮೇಲೆ ಸಹಿ ಮಾಡಿದ್ದೇನೆ ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಹಾಗೂ ಆತನ ಸ್ನೇಹಿತನ ಮೇಲೆ ಒಂದು ಕ್ರಿಮಿನಲ್ ಮೊಕದ್ದಮೆ ನಡೆದಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 1 ನೇ ಆರೋಪಿತರ ಪರವಾಗಿ ಶ್ರೀ. ಎಸ್.ಐ.ಎಚ್. ವಕೀಲರು ಅದೇ ಪಾಟೀ ಸವಾಲನ್ನು ಅನ್ವಯಿಸಿಕೊಳ್ಳುತ್ತಾರೆ.

**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 10**
**ಚಾ.ಸಾ.ಸಂಖ್ಯೆಃ 04**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

**ಸಹಿ**/-

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**